ಶ್ರೀ ಗೋವಿಂದ ಎಂ ಕಾರ್ಜೋಳ

ಅ) ಹಲವು ಸಂಘ ಸಂಸ್ಥೆಗಳು ಈ ಕುರಿತು ಮನವಿ ಸಲ್ಲಿಸಿರುತ್ತವೆ

ಈ ಮೊದಲು ಪ್ರತೀ ಕಾರ್ಡಿಗೆ ಇಡಿಗಂಟಾಗಿ 25 ಕೆ ಜಿ ಆಹಾರ ಧಾನ್ಯಗಳನ್ನು ನೀಡುವ ಪದ್ಧತಿಯಲ್ಲಿ ಒಂದು ಅಥವಾ ಎರಡು ಸದಸ್ಯರಿರುವ ಕುಟುಂಬಗಳಿಗೂ ಸಹ ಹೆಚ್ಚುವರಿ ಸದಸ್ಯರಿರುವ ಕುಟುಂಬಗಳಿಗೂ ಸಹ ಸಹಾಯಧನಯುಕ್ತ ಆಹಾರ ಧಾನ್ಯಗಳನ್ನು ನೀಡಲಾಗುತ್ತಿತ್ತು ಇದರಿಂದಾಗಿ ಸದಸ್ಯ ಸಂಖ್ಯೆಯ ಆಧಾರದ ಮೇಲೆ ಆಹಾರ ಧಾನ್ಯ ವಿತರಿಸುವ ಯೂನಿಟ್ ಪದ್ಧತಿಯನ್ನು ಆರಂಬಿಸಲಾಗಿರುತ್ತದೆ

ಆ) ಇಲ್ಲ ಯೂನಿಟ್ ಪದದ ಅಳವಡಿಕೆಯಿಂದಾಗಿ ಸಹಾಯದನ ಯುಕ್ತ ಆಹಾರ ಧಾನ್ಯಗಳನ್ನು ಸದಸ್ಯರ ಸಂಖ್ಯೆಯಾದಾರವಾಗಿ ನೀಡಲಾಗುತ್ತಿದೆ ಮೇಲಿನ ಕಾರಣದಿಂದಾಗಿ ಹಾಲಿ ಈ ಪದ್ಧತಿಯನ್ನು ಸ್ಥಗಿತಗೊಳಿಸುವ ಉದ್ದೇಶ ಇರುವುದಿಲ್ಲ

ಇ) ಮೇಲಿನ ಕಾರಣಗಳಿಂದ ಪ್ರಶ್ನೆ ಉದ್ಭವಿಸುವುದಿಲ್ಲ

246(549) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ)

ಮಾನ್ಯ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ರಾಜ್ಯದಲ್ಲಿ ಇರುವ ನ್ಯಾಯಬೆಲೆ ಅಂಗಡಿಗಳ ಸಂಖ್ಯೆ ಎಷ್ಟು? ಪಟ್ಟಣ ಪ್ರದೇಶ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಎಷ್ಟು ಎಷ್ಟು ಇವೆ ?

ಆ) ನ್ಯಾಯಬೆಲೆ ಅಂಗಡಿಗಳ ಮೂಲಕ ಪಡಿತರ ಆಹಾರ ಧಾನ್ಯಗಳ ಅರ್ಹ ಫಲಾನುಭವಿಗಳಿಗೆ ಸಮಪರ್ಕವಾಗಿ ವಿತರಣೆಯಾಗದಿರುವುದ ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಯಾವ ಯಾವ ರೀತಿಯ ಪಡಿತರ ಚೀಟಿಗಳನ್ನು ಹಂಚಿಕೆ ಮಾಡಲಾಗಿದೆ? (ಜಿಲ್ಲಾವಾರು ವಿವರ ನೀಡುವುದು)

ಈ) ಅರ್ಹ ಫಲಾನುಭವಿಗಳಿಗೆ ಪಡಿತರ ಚೀಟಿ ದೊರೆಯದೆ ಅನ್ಯಾಯವಾಗಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಗೋವಿಂದ ಎಂ ಕಾರ್ಜೋಳ

1) ರಾಜ್ಯ ಪಟ್ಟಣ ಪ್ರದೇಶದಲ್ಲಿ 5743 ಹಾಗೂ ಗ್ರಾಮಾಂತ ಪ್ರದೇಶದಲ್ಲಿ 14726 ರಾಜ್ಯದಲ್ಲಿ 20,469 ನ್ಯಾಯಬೆಲೆ ಅಂಗಡಿಗಳು ಕಾರ್ಯ ನಿರ್ವಹಿಸುತ್ತಿವೆ

ಆ) ಸರಕಾರ ನಿಗದಿಪಡಿಸಿದ ಪ್ರಮಾಣದಲ್ಲಿ ನಿಗದಿತ ದರದಲ್ಲಿ ಪಡಿತರ ಪದಾರ್ಥಗಳ ಸಮರ್ಪಕ ವಿತರಣೆಗೆ ಸೂಕ್ತ ಕ್ರಮ ಕೈಗೊಳ್ಳಲಾಗಿದೆ ಪ್ರತಿ ನ್ಯಾಯಬೆಲೆ ಅಂಗಡಿ ಮಟ್ಟದಲ್ಲಿ ಜಾಗೃತಿ ಸಮಿತಿಯನ್ನು ರಚಿಸಿದ್ದು ಸಮಿತಿ ಸದಸ್ಯರು ಸಹ ಸಮರ್ಪಕ ವಿತರಣೆ ಬಗ್ಗೆ ನಿಗಾವಹಿಸುತ್ತಿದ್ದಾರೆ ಸಂಬಂಧ ಪಟ್ಟ ಕಾರ್ಯ ನಿರ್ವಾಹಕ ಸಿಬ್ಬಂದಿ ಸಹ ಆಗ್ಗಿಂದಾಗ್ಗೆ ನ್ಯಾಯಬೆಲೆ ಅಂಗಡಿಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸುತ್ತಿದ್ದಾರೆ ಒಂದು ವೇಳೆ ಅಸಮರ್ಪಕ ವಿತರಣೆ ಬಗ್ಗೆ ದೂರುಗಳು ಬಂದಲ್ಲಿ ಅಂತಹ ನ್ಯಾಯಬೆಲೆ ಅಂಗಡಿಗಳ ವಿರುದ್ಧ ಅಗತ್ಯ ವಸ್ತುಗಳ ಸಾವಿಪ ನಿಯಂತ್ರಣ ಆದೇಶ 1992ರನ್ವಯ ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತದೆ

ಇ) ರಾಜ್ಯದಲ್ಲಿ ಒಟ್ಟಾರೆ ಅನ್ನಪೂರ್ಣ–25,552, ಅಂತ್ಯೋದಯ ಅನ್ನ ಯೋಜನೆ 11,75,903 ಅಕ್ಷಯ 61,27,982 ಹಾಗೂ ಎಪಿಎಲ್ 45,52,766 ಒಟ್ಟು 1,18,82,205 ಪಡಿತರ ಚೀಟಿಗಳನ್ನು ವಿತರಿಸಲಾಗಿದೆ ಬೆಂಗಳೂರು ಅನೌಪಚಾರಿಕ ಪಡಿತರ ಒರದೇಶ ಮತ್ತು ಬೆಂಗಳುರು ನಗರ ಜಿಲ್ಲೆಯ ಈ ಹಿಂದಿನ 7 ನಗರ ಸಭೆಗಳನ್ನು ಒಳಗೊಂಡಂತೆ (ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ)

ಈ) ತಾತ್ಕಾಲಿಕ ಪಡಿತರ ಕೂಪನ್‌ಗಳ ವಿತರಣೆ ನಂತರ ಈ ಹಿಂದೆ ಬಿ ಪಿಎಲ್ ಪಡಿತರ ಚೀಟಿಯನ್ನು ಹೊಂದಿದ್ದ ಕೆಲವು ಕುಟುಂಬಗಳ ಸಮೀಕ್ಷೆ ನಂತರ ಎ ಪೆ ಎಲ್ ಪಡಿತರ ಚೀಟಿ ನೀಡಲಾಗಿದೆಯೆಂದು 7,40,877 ಅರ್ಹ ಕುಟುಂಬಗಳಿಗೆ ಬಿ ಪಿ ಎಲ್ ಪಡಿತರ ಕೂಪನ್‌ಗಳನ್ನು ವಿತರಿಸಲಾಗಿದೆ

Annexure
No of Temporary Coupons Distributed

sl	District Name	APN	AAY	Akshaya	APL	Total
1	Bagalokot	1708	46702	186716	130415	365541
2	Bangalore(R)	2523	34043	297229	110365	444160
3	Bangalore(U)	763	13147	179651	130796	324357
4	Belgaum	0	92825	481897	359361	934083
5	Bellary	0	65978	208504	163912	438394
6	Bidar	1596	44901	159954	116366	322817
7	Bijapur	275	55360	171594	146680	373909
8	Chamarajnagar	1038	36035	152022	52802	241897
9	Chikkamagalur	493	2330	149436	85785	259044
10	Chidtrdurga	0	46767	222289	71743	340799
11	DakshinaKannada	351	15854	450218	140805	337228
12	Davanagere	0	53229	2515116	137167	405512
13	Dgarawad	990	32192	174204	141804	349190
14	Gadag	37	31657	104556	74350	210600
15	Gulbarga	1471	101405	323733	229412	656291
16	Hassam	0	24728	311426	85323	421477
17	Haveri	1253	49597	164629	71341	286820
18	Kodagu	407	5126	78796	50213	134422
19	Kolar	4157	65879	347819	185709	603558
20	Koppal	146	41680	11995	81807	243628
21	Mandya	0	37208	285571	117353	440132
22	Mysore	1835	47991	387563	197855	635244
23	Raichur	2343	60270	150884	142831	356328
24	Shimoga	1323	40666	190874	136253	369116

25 Tumkur	1558	53512	350261	174383	609714
26 Udupi	391	17855	94047	102525	214818
27 Uttarakannada	624	16714	165894	108106	291338
Total	**25552**	**1154631**	**5854758**	**3575456**	**610417**
Bangalore IR area	**0**	**18770**	**200961**	**860287**	**080018**
CMSs	**0**	**2482**	**72263**	**117023**	**191768**
Total	**25552**	**1175903**	**6127982**	**4552766**	**1882203**

247(551) ಶ್ರೀ ವಾಟಾಳ್ ನಗರಾಜ್

ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

1) ರಾಜ್ಯದಲ್ಲಿ ರೈತರು ಸಾಲದ ಬಾದೆಯನ್ನು ತಾಳಲಾರದೆ ಇದುವರೆವಿಗೂ ಸತ್ತಿರುವ ದುರ್ದೈವಿ ರೈತರ ಸಂಖ್ಯೆ ಎಷ್ಟು?

2) ರೈತರ ಆತ್ಮ ಹತ್ಯೆಯನ್ನು ತಡೆಯಲು ಸರಕಾರ ಕೈಗೊಂಡಿರುವ ಕ್ರಮಗಳೇನು?

3) ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬದವರೆಗೆ ಇದುವರೆಗೂ ಕೊಟ್ಟಿರುವ ಪರಿಹಾರ ಧನವೆಷ್ಟು?

ಶ್ರೀ ಬಂಡೆಪ್ಪ ಕಾಶೆಂಪೂರ್

1) ರಾಜ್ಯದಲ್ಲಿ ಏಪ್ರಿಲ್ 2003 ರಿಂದ ಜೂನ್ 2007 ಅಂತ್ಯದವರೆಗೆ 1514 ರೈತರ ಆತ್ಮಹತ್ಯೆ ಪ್ರಕರಣಗಳು ದಾಖಲಾಗಿವೆ

2) ರೈತರ ಆತ್ಮಹತ್ಯೆ ತಡೆಯಲು ಸರಕಾರ ಕೈಗೊಂಡ ಕ್ರಮಗಳು ಇಂತಿವೆ

ಅ) ಶೇಕಡ 4 ರ ಬಡ್ಡಿ ದರದಲ್ಲಿ ಸಹಕಾರಿ ಸಂಸ್ಥೆಗಳ ಮೂಲಕ ರೈತರಿಗೆ ಸಾಲ ನೀಡುವುದು